ಅಬಕಾರಿ ಇಲಾಖೆಯಿಂದ ರಾಜ್ಯದ ಬೊಕ್ಕಸಕ್ಕೆ ಬರುವ ಆದಾಯ

197 (1240) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಬೊಕ್ಕಸಕ್ಕೆ ಅಬಕಾರಿ ಇಲಾಖೆಯ ಸಾರಾಯಿ ಹರಾಜಿನಿಂದ ಬರುತ್ತಿರುವ ಆದಾಯವೆಷ್ಟು; ಜಿಲ್ಲಾವಾರು ವಿವರ ಒದಗಿಸುವುದು;

ಆ) ಆದಾಯ ಸೋರುವಿಕೆಯನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) :

ಅ) 2005–06ನೇ ಸಾಲಿನ ಅಬಕಾರಿ ವರ್ಷದಲ್ಲಿ ಜುಲೈ 2005ರಿಂದ ಜೂನ್ 2006ರವರೆಗೆ ರಾಜ್ಯದ ಬೊಕ್ಕಸಕ್ಕೆ ಸಾರಾಯಿ ಮಾಸಿಕ ಬಾಡಿಗೆ ಹಣದ ರೂಪದಲ್ಲಿ ಪ್ರತಿ ಮಾಹೆ ರೂ. 144.96 ಕೋಟಿಗಳ ಆದಾಯ ಬರುತ್ತಿದೆ. ಜಿಲ್ಲಾವಾರು ವಿವರ ಈ ಕೆಳಗಿನಂತಿದೆ:

(ಕೋಟಿ ರೂ.ಗಳಲ್ಲಿ)

ಕ್ರ. ಸಂ.	ಜಿಲ್ಲೆ	2005–06ನೇ ಸಾಲಿಗೆ ಪ್ರತಿ ಮಾಹೆ ವಸೂಲಾಗುವ ಸಾರಾಯಿ ಬಾಡಿಗೆ
1.	ಬೆಂಗಳೂರು ನಗರ	16.50
2.	ಬೆಂಗಳೂರು ಗ್ರಾಮಾಂತರ	9.08
3.	ಬಾಗಲಕೋಟೆ	1.98
4.	ಬೆಳಗಾಂ	6.23
5.	ಬಳ್ಳಾರಿ	7.57
6.	ಬೀದರ್	3.10
7.	ಬೀಜಾಪುರ	2.04
8.	ಚಾಮರಾಜನಗರ	2.47
9.	ಚಿಕ್ಕಮಗಳೂರು	5.21
10.	ಚಿತ್ರದುರ್ಗ	4.94
11.	ದಕ್ಷಿಣ ಕನ್ನಡ	7.27
12.	ದಾವಣಗೆರೆ	5.53
13.	ಧಾರವಾಡ	1.91
14.	ಗದಗ್	1.45
15.	ಗುಲ್ಬರ್ಗಾ	7.35
16.	ಹಾಸನ	5.92
17.	ಹಾವೇರಿ	3.77

18.	ಕೊಡಗು	3.40
19.	ಕೋಲಾರ	5.85
20.	ಕೊಪ್ಪಳ	2.78
21.	ಮಂಡ್ಯ	7.23
22.	ಮೈಸೂರು	8.51
23.	ರಾಯಚೂರು	3.56
24.	ಶಿವಮೊಗ್ಗ	6.24
25.	ತುಮಕೂರು	7.62
26.	ಉಡುಪಿ	4.57
27.	ಉತ್ತರ ಕನ್ನಡ	2.88
	ಒಟ್ಟು	**144.96**

ಆ) ಆದಾಯ ಸೋರುವಿಕೆಯನ್ನು ತಡೆಗಟ್ಟಲು ಸಲುವಾಗಿ ಸೆಕೆಂಡ್ಸ್ ಮದ್ಯದ ಹಾವಳಿಯನ್ನು ತಡೆಗಟ್ಟುವುದಕ್ಕೆ 01–07–2003ರಿಂದ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ ಸಂಸ್ಥೆಯನ್ನು ಪ್ರಾರಂಭಿಸಿ, ರಾಜ್ಯದಲ್ಲಿ ಮಾರಾಟವಾಗುವ ಎಲ್ಲಾ ರೀತಿಯ ಮದ್ಯವನ್ನು ಈ ನಿಗಮದ ಮೂಲಕವೇ ಮಾರಾಟ ಮಾಡಲಾಗುತ್ತಿದೆ. ಇದಲ್ಲದೇ ರಾಜ್ಯದಲ್ಲಿ ತಯಾರಾಗುವ ಹಾಗೂ ಆಮದಾಗುವ ಎಲ್ಲಾ ಮದ್ಯಸಾರವನ್ನು ತಯಾರಾಗುವ ಹಾಗೂ ಆಮದಾಗುವ ಎಲ್ಲಾ ಮದ್ಯಸಾರವನ್ನು ನಿಗಮದ ಮೂಲಕವೇ ವಿತರಿಸಲಾಗುತ್ತಿದೆ. ನಕಲಿ ಮದ್ಯಕಳ್ಳಭಟ್ಟಿ ಸಾರಾಯಿ ಕೇಂದ್ರಗಳನ್ನು ಗುರುತಿಸಿ ಅಬಕಾರಿ ಸಿಬ್ಬಂದಿಯ ಹಾಗೂ ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ರಾಜ್ಯದ ಎಲ್ಲಾ ಕಡೆ ದಾಳಿ ನಡೆಸಲಾಗುತ್ತಿದೆ. ಅಕ್ರಮ ಮದ್ಯ ಸಂಗ್ರಹ : ಸಾಗಾಣಿಕೆ ಮತ್ತು ಮಾರಾಟವನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಅಲ್ಲದೆ ಇಂತಹ ಕೃತ್ಯಗಳನ್ನು ಜಾಮೀನುರಹಿತ ಪ್ರಕರಣಗಳೆಂದು ಪರಿಗಣಿಸಿ ಅಬಕಾರಿ ಕಾಯ್ದೆಗೆ ತಿದ್ದುಪಡಿ ತಂದು ಅಬಕಾರಿ ಇಲಾಖೆಯಲ್ಲಿ ಜಾರಿ ಮತ್ತು ತನಿಖೆ ಕಾರ್ಯಗಳನ್ನು ಚುರುಕುಗೊಳಿಸಿ ಸಮಾಜಘಾತಕ ವ್ಯಕ್ತಿಗಳನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಕ್ರಮ ಜರುಗಿಸಲಾಗುತ್ತದೆ.

ಮೇ 2005 ರಿಂದ ಇಲಾಖೆಯನ್ನು ಪುನರ್ ರಚಿಸಿ ಜಾರಿ ಮತ್ತು ತನಿಖೆ ಕಾರ್ಯವನ್ನು ಚುರುಕುಗೊಳಿಸಲಾಗಿದ್ದು, ಇಲಾಖೆಯ ಜಾರಿ ಮತ್ತು ತನಿಖೆ ಸಿಬ್ಬಂದಿಗಳಿಗೆ ಮೊಬೈಲ್ ದೂರವಾಣಿ ನೀಡಲಾಗಿದ್ದು, ಪ್ರತಿಯೊಂದು (ಜಾರಿ ಮತ್ತು ತನಿಖೆ) ತಾಲ್ಲೂಕುಗಳಿಗೆ ಮತ್ತು ವಲಯಕ್ಕೆ ಒಂದರಂತೆ ಹೊಸ ವಾಹನಗಳನ್ನು ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. 2004ರಲ್ಲಿ 233 ಅಬಕಾರಿ ಉಪ ನಿರೀಕ್ಷಕರನ್ನು ಲೋಕಸೇವಾ ಆಯೋಗದ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ. 350 ಅಬಕಾರಿ ರಕ್ಷಕರ ನೇಮಕ ಮಾಡಿಕೊಳ್ಳಲು ಕ್ರಮ ಜರುಗಿಸಲಾಗಿದೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, ರಾಜ್ಯ ಬೊಕ್ಕಸಕ್ಕೆ ಅಬಕಾರಿ ಇಲಾಖೆಯ ಸಾರಾಯಿ ಹರಾಜಿನಿಂದ ಬರುತ್ತಿರುವ ಆದಾಯವೆಷ್ಟು? ಜಿಲ್ಲಾವಾರು ವಿವರ ಒದಗಿಸಬೇಕೆಂದು ಪ್ರಶ್ನೆ ಕೇಳಿದ್ದೆ. 2005–2006ನೇ ಸಾಲಿನ ವಿವರವನ್ನು ಒದಗಿಸಿದ್ದಾರೆ. ಹಾಗೆಯೇ ಮಾಸಿಕ ಒಟ್ಟು 144.96 ಕೋಟಿ ರೂಪಾಯಿ ಅದರಲ್ಲಿ ಆದಾಯ ಇದೆ ಎಂದೂ ಸಹ ಹೇಳಿದ್ದಾರೆ. ಆದರೆ 2006–2007ನೇ ಸಾಲಿನ ಮಾಹಿತಿ ಸಿಕ್ಕಿಲ್ಲ. ಮತ್ತೆ ಆದಾಯ ಸೋರುವಿಕೆಯನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು ಎನ್ನತಕ್ಕಂಥ ಪ್ರಶ್ನೆಯನ್ನೂ ಸಹ ಕೇಳಿದ್ದೆ. ಆದಾಯ ಸೋರುವಿಕೆಯನ್ನು ತಡೆಗಟ್ಟುವ ಸಲುವಾಗಿ ಸೆಕೆಂಡ್ಸ್ ಮದ್ಯದ ಹಾವಳಿಯನ್ನು ಮತ್ತು ಪಾನೀಯ ನಿಗಮ ಸಂಸ್ಥೆಯನ್ನು ಪ್ರಾರಂಭ ಮಾಡಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ಇವೆಲ್ಲವನ್ನೂ ಮಾಡಿದ ನಂತರ ಸಂಪೂರ್ಣವಾಗಿ ಆದಾಯ ಸೋರುವಿಕೆಯನ್ನು ತಡೆಗಟ್ಟುವುದರಲ್ಲಿ ಸರ್ಕಾರ ಯಶಸ್ವಿಯಾಗಿದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಗೊತ್ತಿರುವ ಹಾಗೆ ಈ ಅಬಕಾರಿ ಅವಧಿ ಜುಲೈ ತಿಂಗಳಿಂದ ಜೂನ್ ತಿಂಗಳವರೆಗೆ. ಈಗ ಹೊಸದಾಗಿ ಅಬಕಾರಿ ಹರಾಜುಗಳೆಲ್ಲಾ ಪ್ರಾರಂಭವಾಗಿದೆ. ಇದು ಇಡೀ ರಾಜ್ಯದಲ್ಲಿ ಈಗಾಗಲೇ ಪ್ರಾರಂಭವಾಗಿದ್ದು ಈಗ ಮುಗಿಯುತ್ತಾ ಬಂದಿದೆ. ಆದರೆ, ಬೆಂಗಳೂರು ನಗರದಲ್ಲಿ ಸ್ವಲ್ಪ ತೊಂದರೆ ಈಗ ಮತ್ತೆ ಹೊಸದಾಗಿ ಟೆಂಡರ್ ಕರೆಯತಕ್ಕಂಥ ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ಈಗ ಇರತಕ್ಕಂಥ ರೇಟನ್ನೇ ಕೊಟ್ಟು ಅವರನ್ನು ಮುಂದುವರಿಸತಕ್ಕಂಥ ಕೆಲಸ ಮಾಡಿದ್ದೇವೆ. ಅವರು ರೇಟ್‌ನ್ನು ಕಡಿಮೆ ಹಾಕಿದ್ದರು, ಅದು ಸಾಧ್ಯವಿಲ್ಲ ಇಲ್ಲದಿದ್ದರೆ ಕ್ಯಾನ್ಸಲ್ ಮಾಡುತ್ತೇವೆ ಎಂಬ ತೀರ್ಮಾನಕ್ಕೆ ಹೋಗಿದ್ದೆವು. ಈಗಾಗಲೇ ಹೇಳಿರುವ ಪ್ರೋಸಸ್‌ನಲ್ಲಿ ನಾವು ಇದ್ದೇವೆ. ಹಾಗೆಯೇ ಈಗ ಇರತಕ್ಕಂಥ ರೇಟ್‌ನಲ್ಲಿಯೇ ವಸೂಲಿ ಮಾಡತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಸೋರುವಿಕೆಯನ್ನು ತಡೆಗಟ್ಟುವುದಕ್ಕೋಸ್ಕರ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದನ್ನು ತಾವು ಕೇಳಿದ್ದಿರಿ. ಕಳೆದ ವರ್ಷ ಸಾಕಷ್ಟು ಪ್ರಗತಿಯಾಗಿದೆ. ಹಿಂದಿನ ಸರ್ಕಾರ ಇದನ್ನು ಮಾಡಿದ್ದರಿಂದ ಅವರಿಗೆ ನಾವು ಅಭಿನಂದನೆ ಸಲ್ಲಿಸಬೇಕಾಗಿದೆ. ನಾವು ಈಗ ಒಂದು ಬಿಗಿ ಕ್ರಮ ತೆಗೆದುಕೊಂಡು ತೆರಿಗೆ ಸಂಗ್ರಹದ ಕೆಲಸ ದೊಡ್ಡ ಪ್ರಮಾಣದಲ್ಲಿ ಆಗಿರತಕ್ಕಂಥದ್ದನ್ನು ತಾವು ಒಪ್ಪುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಉದಾಹರಣೆಗೆ ಹೇಳುವುದಾದರೆ 2005–2006ನೇ ಸಾಲಿನಲ್ಲಿ ನಮ್ಮ target 3025 ಕೋಟಿ ರೂಪಾಯಿಗಳಿಷ್ಟಿತ್ತು. ಆದರೆ, ನಾವು ಸಂಗ್ರಹ ಮಾಡಿರತಕ್ಕಂಥದ್ದು 3393 ಕೋಟಿ ರೂಪಾಯಿ. ಮತ್ತೆ ಈ ವರ್ಷ ಅಂದರೆ, 2006–2007ನೇ ಸಾಲಿನಲ್ಲಿ 4060 ಕೋಟಿ ರೂಪಾಯಿಗಳ ಗುರಿಯನ್ನು ಇಟ್ಟುಕೊಂಡಿದ್ದೇವೆ. ಅಂದರೆ, ಕಳೆದ ನಾಲ್ಕೈದು ವರ್ಷಗಳಿಗೆ ಹೋಲಿಸಿದರೆ ಸೋರಿಕೆ ಪ್ರಮಾಣ ಕ್ರಮೇಣ ಕಡಿಮೆಯಾಗಿ ಅಂದರೆ ಸೆಕೆಂಡ್ಸ್ ಹಾವಳಿ ತಡೆಯುವುದರ ಜೊತೆಗೆ ಇದರ ಬಗ್ಗೆ ಬಿಗಿ ಕ್ರಮ ತೆಗೆದುಕೊಂಡಿರತಕ್ಕಂಥ ಪರಿಣಾಮವೇ ಈ ವರ್ಷದ ಗುರಿಯನ್ನು 4060 ಕೋಟಿ ರೂಪಾಯಿಗಳಷ್ಟು ಇಟ್ಟುಕೊಂಡಿದ್ದೇವೆ. ಮತ್ತೆ ನಾವು ಈಗಾಗಲೇ ಸುಮಾರು 156 ರಿಂದ 157 ತಾಲ್ಲೂಕುಗಳಲ್ಲಿ ಹರಾಜನ್ನು ಮಾಡಿದಾಗ ನಮಗೆ ಸುಮಾರು 18 ರಿಂದ 19 ಪರ್ಸೆಂಟ್‌ನಷ್ಟು ಏರಿಕೆ ಕೂಡ ಸಿಕ್ಕಿದೆ. ಬೆಂಗಳೂರು ಸುತ್ತಮುತ್ತಲಿಗೆ

ಸಂಬಂಧಪಟ್ಟಂತೆ ಸ್ವಲ್ಪ ಗೊಂದಲವಾಗಿದೆ. ಕಳೆದ ವರ್ಷ ಬಹಳ ದುಬಾರಿಯಾಗಿದ್ದು, ಈಗ ವರ್ಷ ಸುಮಾರು 13 ರಿಂದ 14 ಪರ್ಸೆಂಟ್‌ನಷ್ಟು ಕಡಿಮೆ ಮಾಡುತ್ತೇವೆಂದು ಹೇಳಿದರು. ಕ್ಯಾನ್ಸಲ್ ಮಾಡಬೇಕೆಂಬ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡ ಮೇಲೆ ಈಗ ಅದೇ ರೇಟ್‌ಗೆ ಮುಂದುವರಿಸಬೇಕೆಂದು ಇವತ್ತು ಒಂದು ಸುತ್ತೋಲೆಯನ್ನು ಕಳುಹಿಸಿಕೊಡುತ್ತಿದ್ದೇನೆ. ನಮಗೆ ಎಷ್ಟೇ ಒತ್ತಡ ಬಂದರೂ ಕೂಡ ಮೊದಲು ಇದ್ದಂಥ ಹೋಲ್‌ಸೆಲ್ ಡೀಲರ್ಸ್‌ನ್ನು ನಾವು ತೆಗೆದು ಹಾಕಿದ್ದೇವೆ. ಪಾನೀಯ ನಿಗಮದಿಂದ ನೇರವಾಗಿ ರೀಟೆಲರ್ಸ್ ತೆಗೆದುಕೊಳ್ಳುವಂಥ ಪ್ರಯತ್ನವನ್ನು ಮಾಡಿದ್ದೇವೆ. ರಾಜ್ಯ ಎಲ್ಲಾ ಕಡೆ ಧಾಳಿ ಮಾಡಿ ನಕಲಿ ಮದ್ಯ ಕಳ್ಳಬಟ್ಟಿ ಕೇಂದ್ರಗಳನ್ನು ಗುರುತಿಸಿ ಅಕ್ರಮ ಮದ್ಯ ಕಳ್ಳಬಟ್ಟಿ ತಯಾರಕರಿಗೆ ಜಾಮೀನು ರಹಿತ ಪ್ರಕರಣವೆಂದು ಅವರ ಮೇಲೆ ಕೇಸ್‌ನ್ನು ಹಾಕುತ್ತಿದ್ದೇವೆ. ಈ ರೀತಿಯಾಗಿ ಸಾಕಷ್ಟು ಬಿಗಿ ಕ್ರಮ ತೆಗೆದುಕೊಂಡಿರತಕ್ಕಂಥ ಪರಿಣಾಮ ಇಲಾಖೆಯಲ್ಲಿನ ಆದಾಯ ಹೆಚ್ಚಾಗಿದೆ. ನಮ್ಮ ನಿರೀಕ್ಷೆಯ ಪ್ರಮಾಣದಷ್ಟು ಆದಾಯ ತರುವಂಥ ಎಲ್ಲಾ ಪ್ರಯತ್ನಗಳನ್ನು ನಾವು ಈ ವರ್ಷ ಮಾಡುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ತಾವು ಬ್ಯಾನ್ ಮಾಡಿದ್ದೀರೆಂಬುದನ್ನು ನಾವು ಕೇಳಿದ್ದೇವೆ. ಬೆಂಗಳೂರಿನಲ್ಲಿ ಅರಾಕ್ ಸೇಲ್ಸ್‌ನ್ನು ನಿಲ್ಲಿಸುವುದಕ್ಕೆ ತಾವು ಎರಡು-ಮೂರು ದಿವಸಗಳ ಹಿಂದೆ ನಿರ್ಧಾರ ತೆಗೆದುಕೊಂಡಿದ್ದೀರಿ. ಮತ್ತೆ ಅದನ್ನು ಮುಂದುವರಿಸುತ್ತೇವೆಂದು ತಾವು ಇವತ್ತು ಹೇಳುತ್ತಿದ್ದೀರಿ. ಒಂದು ದಿವಸದಲ್ಲಿ ಇದರ ಸೇಲ್ಸ್ ಬೆಂಗಳೂರು ನಗರದಲ್ಲಿ ಕಡಿಮೆಯಾಗಿದ್ದರಿಂದ ಎಷ್ಟು ನಷ್ಟ ಆಯಿತ್ತೆಂಬುದರ ಬಗ್ಗೆ ತಾವು ಹೇಳಬೇಕು. ಬೆಂಗಳೂರು ಸಿಟಿಯಲ್ಲಿ ಅರಾಕ್ ಸೇಲ್ಸ್‌ನ್ನು ತಾವೇನಾದರೂ ನಿಲ್ಲಿಸಿದರೆ ಹೊರ ರಾಜ್ಯಗಳಿಂದ ಇಲ್ಲಿಗೆ ಎಷ್ಟು ಅರಾಕ್ ಬರುತ್ತದೆ ಎಂಬುದನ್ನು ತಾವು ಹೇಳಬೇಕು. ಸುಮಾರು 16 ರಿಂದ 17 ಕೋಟಿ ರೂಪಾಯಿಗಳಷ್ಟು ವರಮಾನ ಬರತಕ್ಕಂಥ ಕಡೆ ನೀವು ದಿಢೀರೆಂದು ನಿಲ್ಲಿಸಿದಾಗ ಇದರಿಂದ ಬರತಕ್ಕಂಥ ಆದಾಯಕ್ಕೆ ತಾವೇನು ಮಾಡುತ್ತೀರೆಂಬುದನ್ನು ತಾವು ಹೇಳಬೇಕು. ಏಕೆಂದರೆ ಕುಡಿಯುವುದನ್ನು ತಾವು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಹೊರಗಡೆಯಿಂದ ಎಷ್ಟು ಬರುತ್ತದೆಂಬುದನ್ನು ತಾವು ಹೇಳಬೇಕು. ಮೂರನೇ ಪ್ರಶ್ನೆ ಏನೆಂದರೆ, ಅಂತಿಮವಾಗಿ ಅದೇ ರೇಟ್‌ನ್ನು ಕಂಟಿನ್ಯೂ ಮಾಡುತ್ತೀರೆಂದರೆ ತಾವು ಎಲ್ಲಿಯಾದರೂ ಅವರಿಗೆ ಯೀಲ್ಡ್ ಆಗಿದ್ದೀರಾ ಎಂಬುದನ್ನು ತಾವು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ, ಈ ವರ್ಷ ಅರಾಕ್ ಹರಾಜು 7 ಪರ್ಸೆಂಟ್‌ನಿಂದ 22 ಪರ್ಸೆಂಟ್‌ನವರೆಗೆ ವೇರಿಯೇಷನ್ ಆಗಿದೆ. ಆದ್ದರಿಂದ ಬೆಂಗಳೂರಿನಲ್ಲಿ 1 ಪರ್ಸೆಂಟ್‌ನಷ್ಟು ಜಾಸ್ತಿ ಕೊಡುವುದಿಲ್ಲ ಎಂಬ ಅವರ ಒತ್ತಡಕ್ಕೆ ತಾವು ಮಣಿದಿರಾ ಅಥವಾ ಏನು ಮಾಡಿದ್ದೀರಾ ಎಂಬುದನ್ನು ತಾವು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ತಮಗೆ ಗೊತ್ತಿರುವ ಹಾಗೆ ಬೆಂಗಳೂರಿನಲ್ಲಿ 16 ಕೋಟಿ 50 ಲಕ್ಷ ರೂಪಾಯಿಗೆ ಅವರು ಇಟ್ಟುಕೊಂಡಿದ್ದರು. ಇದು ಒಂದು ತಿಂಗಳಿಗೆ ನಿಗದಿ ಆಗಿದ್ದಂಥದ್ದು. ಈ ಬಾರಿ ಎಲ್ಲಾ ರೀತಿಯ ಪ್ರಯತ್ನ ಮಾಡಿ ಒತ್ತಾಯ ತಂದ ಮೇಲೂ ಸಹ ಮತ್ತೆ ಕಳೆದ ಸಾರಿ ನಾವು ಸಿಕ್ಕಪಟ್ಟೆ ಜಾಸ್ತಿಗೆ ತೆಗೆದುಕೊಂಡಿದ್ದು ಈ ವರ್ಷ ನಮಗೆ ಲಾಸ್ ಆಗುತ್ತದೆ ಆದ್ದರಿಂದ ನಾವು ನಡೆಸುವುದಕ್ಕೆ

ಸಾಧ್ಯವಾಗುವುದಿಲ್ಲ ಆದ್ದರಿಂದ ನಮಗೆ 20 ಪರ್ಸೆಂಟ್‌ನಷ್ಟು ಕಡಿಮೆ ಕೊಡಬೇಕೆಂದು ಅವರು ಬೆನ್ನತ್ತಿದರು. ಇದು ಸಾಧ್ಯವೇ ಇಲ್ಲವೆಂದು ಹೇಳಿದೆವು. ಇಡೀ ರಾಜ್ಯದಲ್ಲಿ ನಮಗೆ 15 ರಿಂದ 20 ಪರ್ಸೆಂಟ್‌ನಷ್ಟು ಜಾಸ್ತಿ ಬಂದಿರಬೇಕಾದರೆ ಮತ್ತು ಬೆಂಗಳೂರು ನಗರದ ಸುತ್ತಮುತ್ತ ಕುಡಿಯುವವರ ಸಂಖ್ಯೆ ಕಡಿಮೆ ಏನೂ ಆಗಿಲ್ಲ ಆದ್ದರಿಂದ ಯಾವುದೇ ಕಾರಣಕ್ಕೂ ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಗತ್ಯ ಬಂದರೆ ಅಬಕಾರಿ ವಿಷಯಕ್ಕೆ ನಾವೊಂದು ನಿರ್ಧಾರ ತೆಗೆದುಕೊಂಡು ಬೆಂಗಳೂರಿನಲ್ಲಿ ಸಾರಾಯಿಯನ್ನೇ ರದ್ದುಮಾಡುತ್ತೇವೆ. ಇದಕ್ಕೆ ಬರತಕ್ಕಂಥ ರಿಸ್ಕ್‌ನ್ನು ನಾವು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆಂದು 24 ಗಂಟೆಯಲ್ಲಿ ಸಾರಾಯಿಯನ್ನೇ ರದ್ದು ಮಾಡತಕ್ಕಂಥ ಕ್ರಮ ತೆಗೆದುಕೊಂಡೆವು. ಅವರು 13.5 ಪರ್ಸೆಂಟ್ ಕಡಿಮೆ ಕೋಟ್ ಮಾಡಿದ್ದರು. ಇದರ ಪರಿಣಾಮ ಸಾರಾಯಿಯನ್ನೇ ರದ್ದು ಮಾಡಿದೆವು. ಈಗ ಅವರು ನಮ್ಮ ಹತ್ತಿರ ಬಂದಿದ್ದಾರೆ. ಇದರ ಬಗ್ಗೆ ನನ್ನದು ಮತ್ತು ಮುಖ್ಯಮಂತ್ರಿಗಳ ನಡುವೆ ಯಾವುದೇ ರೀತಿಯ ಗುಟ್ಟು ಇಲ್ಲ. ಅವರನ್ನು ಕರೆದು ನಾವು ಮಾತನಾಡಿ ಇಡೀ ರಾಜ್ಯದಲ್ಲಿ ಇಷ್ಟೊಂದು ಪ್ರಗತಿ ಇದೆ. ಕಳೆದ ವರ್ಷ ನೀವು ಜಾಸ್ತಿ ಕೊಟ್ಟಿದ್ದೀರಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾವೂ ಕೂಡ ನಮ್ಮೆಲ್ಲಾ ಅಂಕಿ-ಅಂಶಗಳನ್ನು ತರಿಸಿಕೊಂಡಿದ್ದೇವೆ. ಆದರೆ, ನಮಗೆ ಕನಿಷ್ಟ ಒಂದು ಪರ್ಸೆಂಟ್‌ನಷ್ಟು ಜಾಸ್ತಿ ಆಗದೇ ಇದ್ದರೆ ಬೇಕಾದರೆ ನಾವು ಸಾರಾಯಿಯನ್ನು ನಿಷೇಧ ಮಾಡುತ್ತೇವೆ. ಇದರಿಂದ ಏನು ಬರುತ್ತದೆಯೋ ಅದನ್ನು ನಾವು ಎದುರಿಸುವುದಕ್ಕೆ ತಯಾರಿದ್ದೇವೆ. ಅಗತ್ಯ ಬಿದ್ದರೆ ಇಡೀ ರಾಜ್ಯದಲ್ಲಿಯೇ ಸಾರಾಯಿಯನ್ನು ಬಂದ್ ಮಾಡತಕ್ಕಂಥ ಕ್ರಮವನ್ನು ಮುಂದಿನ ವರ್ಷ ಮಾಡುತ್ತೇವೆಂದು ಹೇಳಿದೆವು. ಒಂದು ದಿವಸ ಹರಾಜನ್ನು ಬ್ಯಾನ್ ಮಾಡಿರತಕ್ಕಂಥದ್ದು ನಿಜ. ಅವರು ಈಗ ಬಂದಿದ್ದಾರೆ. ಹಳೆಯ ರೇಟ್‌ನಲ್ಲಿಯೇ ಇವತ್ತಿನ ದಿವಸ ಮುಂದುವರಿಸಬೇಕೆಂದು ನಾನು ಹೇಳಿದ್ದೇನೆ. ಮೊದಲು ಇದ್ದಂಥ 16 ಕೋಟಿ 50 ಲಕ್ಷ ರೂಪಾಯಿಗೆ ಮುಂದುವರಿಸಬೇಕೆಂದು ಹೇಳಿದ್ದೇನೆ. ಮತ್ತೆ ಹೊಸದಾಗಿ ಟೆಂಡರ್ ಕೂಡ ಕರೆಯುತ್ತಿದ್ದೇವೆ. ಇದರಲ್ಲಿ ಏನು ಕಾಂಪಿಟೇಶನ್ ಬರುತ್ತದೆಯೋ ಅದರ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ನಾವು ಇದುವರೆಗೂ ಯಾರಿಗೂ ಕೂಡ ಬಗ್ಗಿಲ್ಲ ಮತ್ತೆ ಯಾರ ಲಾಬಿಗೂ ಕೂಡ ನಮ್ಮ ಸರ್ಕಾರ ಬಗ್ಗುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರಕ್ಕೆ ಕೊಡುವಷ್ಟು ಕೊಟ್ಟು ನೀನು ಎಷ್ಟಕ್ಕಾದರೂ ಮಾರಾಟ ಮಾಡಿಕೊಳ್ಳಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ಚಿಲ್ಲರೆ ಮಾರಾಟ ಮಾಡತಕ್ಕಂಥ ದರವನ್ನು ಟೆಂಡರ್‌ನಲ್ಲಿ ಸರ್ಕಾರ ನಿಗದಿ ಮಾಡಿದೆ. ಇಷ್ಟಕ್ಕೇ ಮಾರಾಟ ಮಾಡಬೇಕೆಂದು ಕಂಡಿಷನ್ ಇದೆ. ಕಳೆದ ಸಾರಿ 11.5 ದರ ಇತ್ತು. ಕಳೆದ ಸಾರಿ ನೀವು ನಿಗದಿ ಮಾಡಿರತಕ್ಕಂಥ ಬೆಲೆಗಿಂತ ವ್ಯತ್ಯಾಸದ ಬೆಲೆಯಲ್ಲಿ ಮಾರಾಟ ಮಾಡಿದ್ದಾರೆ. 100 ಎಂಎಲ್ ಸ್ಯಾಚೆಟ್‌ಗೆ 13 ರಿಂದ 15 ರೂಪಾಯಿಗಳವರೆಗೆ ಕೆಲವು ಜಿಲ್ಲೆಗಳಲ್ಲಿ ಸೇಲ್ ಆಗಿದೆ. ಬಳಕೆದಾರನ ಕಲ್ಯಾಣವನ್ನೂ ಕೂಡ ನಾವು ನೋಡಬೇಕಾಗುತ್ತದೆ. ಆತನ ಜೇಬಿಗೆ ಕತ್ತರಿ ಹಾಕುವುದಕ್ಕೆ ಆಗುವುದಿಲ್ಲ ಮತ್ತೆ ಅವರೂ ಕೂಡ ಬೇಕಾಬಿಟ್ಟಿ ಸಂಗ್ರಹ

ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಿಮ್ಮ ರೇಟ್ ಕಾಂಟ್ರ್ಯಾಕ್ಟ್ ಪ್ರಕಾರ 11.5 ರೂಪಾಯಿಗೆ ಸೇಲ್ಸ್ ಮಾಡುವ ಹಾಗೆ ನೋಡಿಕೊಳ್ಳುತ್ತಿದ್ದೀರಾ ಅಥವಾ 13, 15 ರೂಪಾಯಿಗೆ ಮಾರಾಟ ಮಾಡಿರತಕ್ಕಂಥ ಜಿಲ್ಲೆಗಳಲ್ಲಿ ಸಂಬಂಧಪಟ್ಟಂಥ ಗುತ್ತಿಗೆದಾರನ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಬಹುತೇಕ ಕಡೆ ನಾವು ಏನು ದರವನ್ನು ನಿಗದಿ ಮಾಡಿದ್ದೇವೆ, ಅದೇ ದರದಲ್ಲಿ ಮಾಡಬೇಕೆಂದು ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಇದು ಮೊದಲನೆಯದು. ಎರಡನೆಯದಾಗಿ ಕಳೆದ 4–5 ವರ್ಷಗಳ ಅಂಕಿ ಅಂಶಗಳನ್ನು ತಾವು ನೋಡಿದಾಗ ಸಾಕಷ್ಟು ಈ ಇಲಾಖೆಯಲ್ಲಿ ತೆರಿಗೆ ಹೆಚ್ಚು ಸಂಗ್ರಹವಾಗುತ್ತಿದೆ. ಅದಕ್ಕೆ ಬಿಗಿ ಕ್ರಮ ತೆಗೆದುಕೊಂಡ ಪರಿಣಾಮದಿಂದಾಗಿ ಮೂರನೆಯದಾಗಿ ಯಾವ ಕಾರಣಕ್ಕೂ ಸಹ ಈ ಒಂದು ಲಾಬಿಯ ಜೊತೆಗೆ ಮಣಿಯು ಪ್ರಶ್ನೆ ಇಲ್ಲ. ನೀವು ಸಹಕಾರ ಕೊಟ್ಟರೆ ನನ್ನ ಚಿಂತನೆ ಇದೆ, ಈ ಪಾಪದ ಹಣದಿಂದ ರಾಜ್ಯ ಸರ್ಕಾರವನ್ನು ನಡೆಸಬೇಕೆಂದು ಏನೂ ಇಲ್ಲ. ಮುಂದಿನ ವರ್ಷ ನೀವು ನಮಗೆ ಸಹಕಾರವನ್ನು ಕೊಟ್ಟರೆ ನಾವು ಸಾರಾಯಿ ಮಾರಾಟವನ್ನೇ ರದ್ದು ಮಾಡಿ ನಾವು ಒಂದು ಒಳ್ಳೆಯ ಕಟ್ಟುನಿಟ್ಟಿನ ನಿಲುವು ತೆಗೆದುಕೊಳ್ಳುವುದಕ್ಕೆ ನಾವು ಬದ್ಧರಾಗಿದ್ದೇವೆ. ಇಡೀ ಸದನ ಭರವಸೆ ಕೊಡುವುದಾದರೆ, ಮುಂದಿನ ವರ್ಷದಿಂದ ಎಲ್ಲವೂ ಸರಿಯಾಗಿ ನಡೆದರೆ ಸಾರಾಯಿಯನ್ನು ಇಡೀ ರಾಜ್ಯದಲ್ಲಿ ಬಂದ್ ಮಾಡುವುದಕ್ಕೆ ನಮ್ಮ ಸರ್ಕಾರ ಸಿದ್ಧವಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮೂಲಭೂತವಾಗಿ ನಾನು ಮಾನ್ಯ ಅಬಕಾರಿ ಸಚಿವರನ್ನು ಕೇಳುತ್ತಿದ್ದೇನೆ. ಈ ಸಾರಾಯಿ ತಯಾರಿಕೆ ಏನು ಇದೆಯಲ್ಲಾ ಇದು ವಿಷ. ಇದನ್ನು ನಿಮ್ಮಲ್ಲಿ ಸರಿಯಾಗಿ ಪರಿಶೀಲನೆ ಮಾಡುತ್ತಾರೊ ಇಲ್ಲವೋ ಗೊತ್ತಿಲ್ಲ, ಇದೊಂದು ಹಗಲು ದರೋಡೆ. ಸ್ಪಿರಿಟ್, ನೀರು ಹಾಕುವುದು ಪ್ಯಾಕೆಟ್ ತಯಾರು ಮಾಡುವುದು. ಆ ಪ್ಯಾಕೆಟ್ ಮೇಲೆ ಸರ್ಕಾರದ ಗಂಡುಬೇರುಂಡ ಚಿಹ್ನೆ ಅದನ್ನು ತಾವು ನೋಡಿರಬೇಕು. ಆ ಸಾರಾಯಿ ಪ್ಯಾಕೆಟ್ ಮೇಲೆ, ಅದನ್ನು ತೆಗೆಸಬೇಕು, ನಾಚಿಕೆಯಾಗುತ್ತದೆ. ಎಲ್ಲದರ ಮೇಲೆ ಸರ್ಕಾರದ ಗಂಡುಬೇರುಂಡ ಚಿಹ್ನೆ ಹಾಕಿಕೊಂಡು ಕುಳಿತುಕೊಂಡರೆ, ಹೇಗೆ? ಇದರಿಂದ ಸರ್ಕಾರಕ್ಕೆ ಹಣ ಬರುತ್ತದೆ. ಅದನ್ನು ನಾವು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸುತ್ತಿದ್ದೇವೆ. ನೀವು ಹೆಚ್ಚಿನ ಒಂದು ಭರವಸೆಯನ್ನು ನೀಡಿದ್ದೀರಿ. ನಾನು ನೇರವಾಗಿ ಕೇಳುತ್ತಿದ್ದೇನೆ, ಮೂಲಭೂತವಾಗಿ ಸಮಗ್ರವಾದ ಪಾನ ನಿರೋದ ನೀತಿಯನ್ನು ತರುವುದಕ್ಕೆ ಸರ್ಕಾರದಿಂದ ನೀವು ಚಿಂತನೆಯನ್ನು ಮಾಡುತ್ತೀರಾ? ಸಾರಾಯಿ ಮಾರಾಟದಿಂದ ಹಳ್ಳಿಯ ಆರ್ಥಿಕ ಪರಿಸ್ಥಿತಿ ನಾಶವಾಗಿದೆ. ಹಳ್ಳಿಯ ಜನಕ್ಕೆ ತೊಂದರೆಯಾಗುತ್ತಿದೆ. ಹಳ್ಳಿಯ ಊರಿನ ಬಾಗಿಲದಲ್ಲಿ ಸಾರಾಯಿ ಅಂಗಡಿ ಇದೊಂದು ಅನಿಷ್ಟ ಪದ್ಧತಿ. ಇದನ್ನು ಸಮಗ್ರವಾಗಿ ತಪ್ಪಿಸುವುದಕ್ಕೆ ಪಾನನಿರೋಧ ಪದ್ಧತಿಯನ್ನು ತರುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ?

ಅಧ್ಯಕ್ಷರು : ಬೇಡಿಕೆಯ ಮೇಲೆ ಇಂತಹ ವಿಚಾರವನ್ನು ತಾವು ಮಾತನಾಡಬಹುದು. ಬೇಡಿಕೆಗಳು ತಮ್ಮ ಮುಂದೆ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಒಂದು ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನೀವು ಕಂಟ್ರಾಕ್ಟ್ ಕೊಟ್ಟಿದ್ದೀರಿ. ಪ್ರತಿಯೊಂದು ತಾಲ್ಲೂಕಿನಲ್ಲಿ ಕಂಟ್ರಾಕ್ಟರ್‌ಗಳು

ಬಂದು ಕುಳಿತಿದ್ದಾರೆ. ಲೈಸೆನ್ಸ್ ಇರತಕ್ಕಂಥ ಅಂಗಡಿಗಳು ಎಷ್ಟು? ಲೈಸೆನ್ಸ್ ಇಲ್ಲದೆ ನಡೆಸುತ್ತಿರುವ ಅಂಗಡಿಗಳು ಎಷ್ಟು ಎನ್ನುವುದರ ಬಗ್ಗೆ ಎಂದಾದರೂ ನೀವು ಲೆಕ್ಕವನ್ನು ಹಾಕಿದ್ದೀರಾ? ನಮ್ಮ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಅಧಿಕೃತವಾಗಿ ಮಾರಾಟ ಮಾಡಬೇಕಾಗಿರತಕ್ಕಂಥ ಅಂಗಡಿಗಳು 54 ರಲ್ಲಿ ಮಾತ್ರ. ಆದರೆ 302 ಹಳ್ಳಿಗಳಲ್ಲಿ ಅಂಗಡಿಗಳನ್ನು ಇಟ್ಟು ಮಾರಾಟ ಮಾಡುತ್ತಿದ್ದಾರೆ. ಇದರ ಬಗ್ಗೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಇಗ ನೀವು 54 ಅಥವಾ 34 ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟಿರುತ್ತೀರಿ. ಅವರು ನಿಮಗೆ ಅಷ್ಟಕ್ಕೆ ಮಾತ್ರ ಹಣವನ್ನು ಕಟ್ಟುತ್ತಾರೆ. ಇನ್ನು ಉಳಿದಿದ್ದಕ್ಕೆ ಅಂದರೆ ಅನಧಿಕೃತವಾದ ಅಂಗಡಿಗಳಿಂದ ನಿಮಗೆ ಹಣ ಬರುವುದಿಲ್ಲ. ನೀವು ಲೈಸೆನ್ಸ್ ಕೊಡುವುದು 54ಕ್ಕೆ ಅವನು ನಡೆಸತಕ್ಕಂಥದ್ದು 500 ಅಂಗಡಿಗಳು. ಇದರಿಂದ ಹಳ್ಳಿಹಳ್ಳಿಗಳು ನಾಶವಾಗಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಹೇಳಿ?

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ನಾನೊಂದು ಪ್ರಶ್ನೆಯನ್ನು ಕೇಳಿ ಬಿಡುತ್ತೇನೆ. ಸಾರಾಯಿಯನ್ನು ಪೂರ್ತಿಯಾಗಿ ಬಂದ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದು ಪಾಪದ ಹಣ, ಐಎಂಎಲ್ ದಿಂದ ಬರುವಂಥ ಸ್ವರ್ಗದಿಂದ ಬಂದಂಥ ಹಣವೇ? ಹಾಗಾದರೆ ಎಲ್ಲವನ್ನೂ ಬ್ಯಾನ್ ಮಾಡಿ. ಸಾರಾಯಿ ಕೂಡ ಬ್ಯಾನ್ ಮಾಡಿ ಇದೆಲ್ಲವೂ ಪಾಪದ ಹಣವೇ. ಬಡವರು ಕುಡಿಯುವಂಥದ್ದು ಸಾರಾಯಿ; ಈ ರಾಜ್ಯದಲ್ಲಿ ಸಾವಿರಾರು ಜನರು ಸತ್ತಿದ್ದಾರೆ. ಇಲ್ಲಿ ಸಿಟ್ ಲಿಕ್ಕರ್‌ಗಳಲ್ಲಿ ಮಾಡಿ ಸಾರಾಯಿ ವಿಷಯದಲ್ಲಿ ಆಗಿದೆ. ನೀವು ಈ ತರಹ ಮಾಡಿದರೆ ಇಲ್ಲಿ ಸಿಟ್ ಲಿಕ್ಕರ್ ಜಾಸ್ತಿಯಾಗುತ್ತದೆ. ಜನ ಸಾಯುತ್ತಾರೆ. ಮೊನ್ನೆ ತಾನೆ ಅಂದರೆ ಹೋದವರ್ಷ ನೆಲಮಂಗಲ ತಾಲ್ಲೂಕಿನಲ್ಲಿ ಸ್ವಲ್ಪ ಜನ ಸತ್ತರು. ಇವೆಲ್ಲವನ್ನೂ ಕೂಡ ಸರ್ಕಾರ ಒಂದೇ ಸಲ ನಮಗೆ ಪತ್ರಿಕೆಗಳಲ್ಲಿ ಒಳ್ಳೆಯ ಹೆಸರು ಬರಬೇಕು ಎನ್ನುವಂಥ ಒಂದೇ ಚಿಂತನೆ ಅಲ್ಲ. ಮಾಡುವುದಿದ್ದರೆ ಎರಡೂ ತನ್ನಿ. ಐಎಂಎಲ್‌ನಲ್ಲೂ ತನ್ನಿ ಹಾಗೂ ಸಾರಾಯಿನಲ್ಲೂ ತನ್ನಿ. ಇಲ್ಲಿ ಸಿಟ್ ಲಿಕ್ಕರ್ ಮೇಲೆ ಎಲ್ಲಾ ಜವಾಬ್ದಾರಿಯನ್ನು ಸರ್ಕಾರ ವಹಿಸಲಿ. ಇಲ್ಲದಿದ್ದರೆ ಬಡವರಿಗೆ ಒಂದು, ಸಾಹುಕಾರರಿಗೆ ಒಂದು ಎನ್ನುವಂಥ ತಾರತಮ್ಯವನ್ನು ಇದರಲ್ಲಿ ತರಬಾರದು. ಸಾರಾಯಿಯನ್ನು ನೀವು ಏನಾದರೂ ಮಾಡಿದರೆ ಇಲ್ಲಿಸಿಟ್ ಲಿಕ್ಕರ್ ಜಾಸ್ತಿಯಾಗುತ್ತದೆ. ಇದನ್ನು ಸರ್ಕಾರ ಗಮನಿಸಬೇಕಾದದ್ದು ಬಹಳ ಮುಖ್ಯವಿದೆ.

ಅಧ್ಯಕ್ಷರು : ಕುಡಿಯುವುದರ ಬಗ್ಗೆ ಎಲ್ಲರೂ ಬಡವರ ಪರ ಇದ್ದೀರಿ. ಕುಡಿತದಿಂದ ನಮ್ಮ ರೂರಲ್ ಎಕಾನಮಿ ಹಾಳಾಗಿ ಹೋಗಿ ಬಿಟ್ಟಿದೆ. ಕಳ್ಳತನ, ಮೋಸ, ಜೂಜೂ ಎಲ್ಲಾ ನಡೆಯುತ್ತಿದೆ ಅದಕ್ಕೆ ಬೆಂಬಲ ಕೊಡಬೇಕೆಂದರೆ ಅದಕ್ಕೆ ಏನೂ ಅರ್ಥವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಲೈಸೆನ್ಸ್ ಇಲ್ಲದಿರುವ ಯಾವ ಅಂಗಡಿಗಳು ಇವೆ, ಅವರ ಮೇಲೆ ನಾವು ಕಟ್ಟುನಿಟ್ಟಿನ ಒಂದು ಕ್ರಮ ತೆಗೆದುಕೊಳ್ಳುತ್ತೇವೆ. ನಾನು ಹೊಸಬ ಈ ಇಲಾಖೆಗೆ, ಆ ತರಹ ನಾನು ಕ್ರಮ ತೆಗೆದುಕೊಂಡಿದ್ದೇನೆ. ನಾನು ನಿಮಗೆ ಸಲಹೆ ಕೊಟ್ಟಿದ್ದು ಏನೆಂದರೆ, ಈ ಒಂದು ಸಾರಾಯಿ ವ್ಯವಹಾರ, ರಾಜ್ಯದಲ್ಲಿ ಬಂದ್ ಮಾಡಬೇಕು ಎನ್ನುವ ದೊಡ್ಡ ಹೋರಾಟಗಳು ಸ್ತ್ರೀಶಕ್ತ ಹಾಗೂ ಸ್ವಸಹಾಯ ಗುಂಪುಗಳು ಹೋರಾಟವನ್ನು ನಡೆಸಿವೆ. ಈ ವರ್ಷ ನಾವು ಹರಾಜು ಮಾಡಿದ್ದೇವೆ. ನೀವೆಲ್ಲಾ ಸಹಮತವನ್ನು ತೋರಿಸುವುದಾದರೆ, ಇದರ ಬಗ್ಗೆ

ವ್ಯಾಪಕ ಚರ್ಚೆ ನಡೆದು, ಮುಂದಿನ ವರ್ಷ ಇದನ್ನು ರದ್ದು ಮಾಡಬೇಕು ಎನ್ನುವ ಬಗ್ಗೆ ಒಮ್ಮತದ ಅಭಿಪ್ರಾಯ ಬಂದರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೇ ಹೊರತು, ನಾನು ಇದನ್ನು ಏಕಾಏಕಿ ಇವತ್ತೇ ರದ್ದು ಮಾಡುತ್ತೇನೆಂದು ನಾನು ಹೇಳಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿರುವಂಥ ಪ್ರಶ್ನೆಗೆ, ಪರಿಶೀಲನೆ ಮಾಡಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಏನು ಸರಿಪಡಿಸಬೇಕು. ಒಟ್ಟಾರೆ ಇದರ ಬಗ್ಗೆ ವ್ಯಾಪಕವಾದ ಚರ್ಚೆ ಮಾಡೋಣ. ನಾನು ಇದನ್ನು ರಾಜ್ಯದಲ್ಲಿ ಬಂದ್ ಮಾಡಿ ಬಿಡುತ್ತೇನೆಂದರೆ ಇದು ಅಸಾಧ್ಯವಾದಂಥದ್ದು. ಎಲ್ಲೆಲ್ಲಿ ರದ್ದು ಮಾಡುವುದಕ್ಕೆ ಹೋಗಿದ್ದಾರೆ ಅವರು ಕೈಸುಟ್ಟು ಕೊಂಡಿದ್ದಾರೆ ಅದನ್ನು ಮತ್ತೆ ವಾಪಸ್ಸು ಜಾರಿಗೆ ತಂದಿದ್ದಾರೆ. ನಾನು ಯಾವ ಕಾರಣಕ್ಕೂ ಈ ರೀತಿ ಧೈರ್ಯದ ಮಾತನ್ನು ಹೇಳುವುದಿಲ್ಲ. ಅದು ಏನಿಗೆ ಇವತ್ತು ಈ ಒಂದು ವಿಷಯಕ್ಕೆ ಸೀಮಿತವಾಗಿ ನೀವೆಲ್ಲಾ ಸಹಕಾರವನ್ನು ಕೊಡುವುದಾದರೆ, ಸಾರಾಯಿ ಬಗ್ಗೆ ಮುಂದಿನ ವರ್ಷ ರದ್ದು ಮಾಡೋಣ ಎನ್ನುವುದರ ಬಗ್ಗೆ ಯೋಚನೆ ಮಾಡೋಣ ಎಂದು ಹೇಳಿದ್ದೇನೇ ಹೊರತು, ಬೇರೆ ನಾನೇನು ಹೇಳಿಲಿಲ್ಲ. ಉಳಿದಂಥದ್ದು ವ್ಯಾಪಕವಾಗಿ ಚರ್ಚೆಯಾಗಲಿ ಈ ಮನೆಯ ಅಭಿಪ್ರಾಯ ಏನು ಬರುತ್ತದೆ, ಅದರ ಮೇಲೆ ಸರ್ಕಾರ ಸೂಕ್ತವಾದಂಥ ಕ್ರಮ ತೆಗೆದುಕೊಳ್ಳುತ್ತದೆ. ಈ ಸರ್ಕಾರಕ್ಕೆ ದೊಡ್ಡ ಪ್ರಮಾಣದಲ್ಲಿ ಆದಾಯ ಬರುವಂಥ ಒಂದು ಇಲಾಖೆ. ರದ್ದು ಮಾಡುವುದಕ್ಕೆ ಬೇರೆ ರಾಜ್ಯದಲ್ಲಿ, ಸಾಕಷ್ಟು ಪ್ರಯೋಗ ಮಾಡಿ ಸಾಧ್ಯವಿಲ್ಲವೆಂದು ಕೈಬಿಟ್ಟಿದ್ದಾಗಿದೆ. ಇದರಿಂದ ಯಡಿಯೂರಪ್ಪ ಹೊಸ ಪ್ರಯೋಗ ಮಾಡುವುದಕ್ಕೆ ಏನು ಸಾಧ್ಯ? ಅದು ಅಸಾಧ್ಯವಾದ ಮಾತು.

ಶ್ರೀ ಎ.ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೆ, ಮೂಲ ಪ್ರಶ್ನೆಯನ್ನು ನಾನು ಕೇಳಿರುತ್ತೇನೆ. ನನ್ನ ತಾಲ್ಲೂಕಿನ ಅರಳಕಟ್ಟೆ ಎನ್ನುವ ಶಾಲೆ ಇದೆ. ಆ ಜಾಗದಲ್ಲಿ ಒಂದು ಸಾರಾಯಿ ಅಂಗಡಿ ಇದೆ. ರಾತ್ರಿ ಎಲ್ಲಾ ಕುಡಿದು ಸಾರಾಯಿ ಪ್ಯಾಕೆಟ್‌ನ್ನು ಚೆಲ್ಲಿರುತ್ತಾರೆ. ಇವತ್ತು ಶಾಲೆಯಲ್ಲಿ ಪ್ರಾರ್ಥನೆಯಾಗುತ್ತಿದ್ದ ಹಾಗೆ ಮೊದಲನೆಯ ಕರ್ತವ್ಯ ಎಂದರೆ, ಆ ಖಾಲಿ ಪ್ಯಾಕೆಟ್‌ನ್ನು ಆಯ್ದು, ಅದಕ್ಕೆ ಬೆಂಕಿ ಹಚ್ಚುವಂಥದ್ದು. ಅದನ್ನು ಯಾವಾಗ ತಪ್ಪಿಸುತ್ತೀರಿ ಎಂದು, ಮಾನ್ಯ ಸಚಿವರು ಉತ್ತರ ಹೇಳಬೇಕಾಗಿದೆ. ಅರಸೀಕೆರೆ ನಗರದಲ್ಲಿ ಕೂಡ ಇಂದಿರಾನಗರ slum ಹಾಗೂ ಚೌಡೇಶ್ವರಿ ನಗರ ಎಂದು ಇದೆ. ಅಲ್ಲಿ ಕೂಡ ಸಾರಾಯಿ ಅಂಗಡಿಗಳ ಹಾವಳಿ ಜಾಸ್ತಿಯಾಗಿ ಅಲ್ಲಿರತಕ್ಕಂಥ ಹೆಣ್ಣು ಮಕ್ಕಳು ಬಂದು, ಸುಮಾರು ನೂರಾರು ಜನ ಬಂದು ಇದನ್ನು ಏನಾದರೂ ಮಾಡಿ ಸ್ಥಳಾಂತರ ಮಾಡಬೇಕೆಂದು ಹೇಳುತ್ತಿದ್ದಾರೆ. ಸಾಯಂಕಾಲ ಕುಡಿದು ಬಂದು ರಾತ್ರಿ ಹೊತ್ತು ಹೆಣ್ಣುಮಕ್ಕಳಿಗೆ ಹೊಡೆಯತಕ್ಕಂಥದ್ದು ಆಗುತ್ತಿದೆ. ಸುಮಾರು ಒಂದು ತಿಂಗಳಾಯಿತು ನಾನು ಸಚಿವರಿಗೆ ಕಳುಹಿಸಿ, ಇವತ್ತಿನವರೆಗೆ ಅದನ್ನು ತೆರವು ಮಾಡುವುದಕ್ಕೆ ಆಗಿಲ್ಲ ಎನ್ನುವ ಕಳಕಳಿಯ ಬಗ್ಗೆ ಹೇಳಿ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈಗ ಶಾಲೆ ಮತ್ತು ದೇವಸ್ಥಾನ ಇವುಗಳ ಪಕ್ಕದಲ್ಲಿ ಇಡುವುದಕ್ಕೆ ಅವಕಾಶವಿಲ್ಲ. ಆ ತರಹಃ ವಿಶೇಷವಾದ ದೂರುಗಳು ಇದ್ದಂಥ ಕಡೆ ನಾನು ಗಮನವನ್ನು ಕೊಡುತ್ತೇನೆ ಮತ್ತು ಅಧಿಕಾರಿಗಳಿಗೆ ಕ್ರಮ ಗೆಗೆದುಕೊಳ್ಳುವುದಕ್ಕೆ ನಾನು ಸೂಚನೆಯನ್ನು ಕೊಡುತ್ತೇನೆ.

ಅಧ್ಯಕ್ಷರು : ಎಷ್ಟು ಜನ ಇದರ ಮೇಲೆ ಉಪ ಪ್ರಶ್ನೆಗಳನ್ನು ಕೇಳುವುದು? ಯಾರಿಗೂ ಅವಕಾಶವಿಲ್ಲ. ಏನು ಈ ತರಹ ಮಾತನಾಡುತ್ತಿದ್ದೀರಿ? ಇಲ್ಲಿಗೆ ಪ್ರಶ್ನೋತ್ತರ ವೇಳೆಯನ್ನು ಮುಗಿಸಲಾಗಿದೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 3–7–2006ರಂದು 14ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 59 ಪ್ರಶ್ನೆಗಳ ಪೈಕಿ, 51 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಅನುಬಂಧ–I

ಅಧ್ಯಕ್ಷರು : ಮಂಡಿಸಲಾಯಿತು.

2 ಸಭೆಯ ಮುಂದಿಡಲಾದ ಕಾಗದ ಪತ್ರಗಳು

I **ಶ್ರೀ ಬಿ. ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು)ಶ್ರೀ ಹೆಚ್. ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಪರವಾಗಿ : ಮಾನ್ಯ ಅಧ್ಯಕ್ಷರೆ,**

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಮತ್ತು 49ನೇ ಪ್ರಕರಣದ ಮೇರೆಗೆ :

1. ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ 2004–05ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

1964ರ ಬೆಂಗಳೂರು ಜಲಮಂಡಳಿಯ ಅಧಿನಿಯಮ 17(1)ರ ಪ್ರಕರಣದ ಮೇರೆಗೆ :

1. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 2005–06ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಮಂಡಿಸುತ್ತೇನೆ.

II **ಶ್ರೀ ಬಿ. ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ,**

1956ರ ಕಂಪನಿ ಅಧಿನಿಯಮ 619(ಎ) ಪ್ರಕರಣದ ಮೇರೆಗೆ :

1. ತುಂಗಭದ್ರಾ ಸ್ಟೀಲ್ ಪ್ರಾಡೆಕ್ಟ್ ನಿಯಮಿತದ 2004–05ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2004–05ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿ.
3. ದಿ ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯದ 2004–05ನೇ ಸಾಲಿನ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.